# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1076 |
| ಸದಸ್ಯರ ಹೆಸರು | ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 28.12.2022 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ವ್ಯಾಪ್ತಿಯಲ್ಲಿ ಹೊಸದಾಗಿ ರಚನೆಯಾದ ತಾಲ್ಲೂಕುಗಳು ಯಾವುವು; ಈ ತಾಲ್ಲೂಕುಗಳಲ್ಲಿ ಸರ್ಕಾರದ ತಾಲ್ಲೂಕು ಮಟ್ಟದ ಹೊಸ ಕಛೇರಿಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುತ್ತಿವೆಯೇ; ಇದ್ದಲ್ಲಿ, ಯಾವ ತಾಲ್ಲೂಕಿನ ಯಾವ್ಯಾವ ಕಛೇರಿಗಳು ಪ್ರಾರಂಭವಾಗಿ ಕಾರ್ಯನಿರ್ವಹಿಸುತ್ತಿವೆ; (ಮಾಹಿತಿ ನೀಡುವುದು). | ಅವಿಭಜಿತ ಬಳ್ಳಾರಿ (ವಿಜಯನಗರ ಜಿಲ್ಲೆಯನ್ನೂ ಒಳಗೊಂಡಂತೆ) ಜಿಲ್ಲೆಯಲ್ಲಿ ಕೊಟ್ಟೂರು, ಕಂಪ್ಲಿ ಮತ್ತು ಕುರುಗೋಡು ತಾಲ್ಲೂಕುಗಳು ರಚನೆಯಾಗಿರುತ್ತವೆ. ಈ ತಾಲ್ಲೂಕುಗಳಲ್ಲಿ ಕೆಳಕಂಡ ಸರ್ಕಾರಿ ಕಚೇರಿಗಳು ಕಾರ್ಯ ನಿರ್ವಹಿಸುತ್ತಿವೆ.<br><br>**<u>ಕುರುಗೋಡು ತಾಲ್ಲೂಕು:</u>**<br>1) ತಹಸೀಲ್ದಾರ್ ಕಚೇರಿ<br>2) ತಾಲ್ಲೂಕು ಪಂಚಾಯತಿ ಕಚೇರಿ<br>3) ಮುಖ್ಯಾಧಿಕಾರಿ ಕಚೇರಿ, ಪುರಸಭೆ<br>4) ಉಪ ನೊಂದಣಾಧಿಕಾರಿ ಕಚೇರಿ<br>5) ಉಪ ಖಜಾನೆ<br>6) ಅಗ್ನಿಶಾಮಕ ಠಾಣೆ<br>7) ಸಮುದಾಯ ಆರೋಗ್ಯ ಕೇಂದ್ರ<br>8) ಸಹಾಯಕ ಕಾರ್ಯಪಾಲಕ ಅಭಿಯಂತರರ ಕಚೇರಿ, ಹೆಚ್.ಎಲ್.ಸಿ. ವಿಭಾಗ<br>9) ಕೃಷಿ ಅಧಿಕಾರಿ, ತುಂಗಭದ್ರ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮಂಡಳಿ<br>10) ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ<br>11) ಪೊಲೀಸ್ ಠಾಣೆ<br><br>**<u>ಕಂಪ್ಲಿ ತಾಲ್ಲೂಕು</u>**<br>1) ತಹಸೀಲ್ದಾರ್ ಕಚೇರಿ<br>2) ತಾಲ್ಲೂಕು ಪಂಚಾಯತಿ ಕಚೇರಿ<br>3) ಮುಖ್ಯಾಧಿಕಾರಿ ಕಚೇರಿ, ಪುರಸಭೆ<br>4) ಉಪ ನೊಂದಣಾಧಿಕಾರಿ ಕಚೇರಿ<br>5) ಉಪ ಖಜಾನೆ<br>6) ಸಹಾಯಕ ಕಾರ್ಯಪಾಲಕ ಅಭಿಯಂತರರ ಕಚೇರಿ, ನಂ.1 ಉಪ ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ<br>7) ಸಹಾಯಕ ಕೃಷಿ ನಿರ್ದೇಶಕರು, ಜಿಲ್ಲಾ ಕೃಷಿ ತರಬೇತಿ ಕೇಂದ್ರ<br>8) ಪೊಲೀಸ್ ಠಾಣೆ<br>9) ಸಹಾಯಕ ಕಾರ್ಯಪಾಲಕ ಅಭಿಯಂತರರ ಕಚೇರಿ, ಜೆಸ್ಕಾಂ |

| | | |
|---|---|---|
| | | **ಕೊಟ್ಟೂರು ತಾಲ್ಲೂಕು:**<br>1) ತಹಸೀಲ್ದಾರ್ ಕಚೇರಿ<br>2) ತಾಲ್ಲೂಕು ಪಂಚಾಯತಿ ಕಚೇರಿ<br>3) ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿ<br>4) ಉಪ ಖಜಾನೆ<br>5) ಪಶುಪಾಲನ ಮತ್ತು ಪಶುವೈದ್ಯ ಕಚೇರಿ |
| **ಆ)** | ಈ ಹೊಸ ತಾಲ್ಲೂಕುಗಳಲ್ಲಿ ತಾಲ್ಲೂಕು ಮಟ್ಟದ ಕಛೇರಿಗಳು ಪ್ರಾರಂಭವಾಗದೇ ಬರಿ ಹೊಸ ತಾಲ್ಲೂಕು ಘೋಷಣೆಗೆ ಸೀಮಿತವಾಗಿ ಆ ಪ್ರದೇಶದ ಸಾರ್ವಜನಿಕರು ಸರ್ಕಾರಿ ಕೆಲಸ ಕಾರ್ಯಗಳಿಗೆ ಅಲೆದಾಡುವಂತಾಗಿದ್ದು, ಇದನ್ನು ತಪ್ಪಿಸಲು ಯಾವ ಕಾಲಮಿತಿಯಲ್ಲಿ ಈ ಹೊಸ ತಾಲ್ಲೂಕುಗಳಿಗೆ ಸರ್ಕಾರದ ತಾಲ್ಲೂಕು ಮಟ್ಟದ ಎಲ್ಲಾ ಕಛೇರಿಗಳನ್ನು ಪ್ರಾರಂಭಿಸಲಾಗುವುದು? (ವಿವರ ನೀಡುವುದು) | ನೂತನ ತಾಲ್ಲೂಕುಗಳಲ್ಲಿ ಕಂದಾಯ ಇಲಾಖೆ ವತಿಯಿಂದ ತಹಸೀಲ್ದಾರ್ ಕಚೇರಿಯನ್ನು ಪ್ರಾರಂಭಿಸಲಾಗಿದೆ. ಇನ್ನುಳಿದ ಇಲಾಖೆಗಳ ತಾಲ್ಲೂಕು ಮಟ್ಟದ ಕಚೇರಿಗಳನ್ನು ಪ್ರಾರಂಭಿಸಲು ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಅಗತ್ಯ ಸಂಖ್ಯೆಯ ಹುದ್ದೆಗಳನ್ನು ಮಂಜೂರು ಮಾಡಿ ಕಚೇರಿಗಳನ್ನು ಪ್ರಾರಂಭಿಸುವಂತೆ ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳಿಗೆ ನಿರ್ದೇಶನ ನೀಡಲಾಗಿದೆ. ಅದರಂತೆ ಆಯಾ ಇಲಾಖೆ ವತಿಯಿಂದ ಹಂತ-ಹಂತವಾಗಿ ತಾಲ್ಲೂಕು ಮಟ್ಟದ ಕಚೇರಿಗಳನ್ನು ಪ್ರಾರಂಭಿಸಲಾಗುತ್ತದೆ. |

**ಸಂಖ್ಯೆ: ಕಂಇ 91 ಎಲ್‌ಆರ್‌ಡಿ 2022**

**(ಆರ್.ಅಶೋಕ)**
ಕಂದಾಯ ಸಚಿವರು